## ಲಂಡನ್ ಪ್ರಣಯ



ಒಂದು ದಿನ ನೆತ್ತಿ ಕಾಯಿಸುವ ಸೂರ್ಯನ ಉಗ್ರ ಪ್ರತಾಪ. ಇನ್ನೊಂದು ದಿನ ಮಳೆ ಮೋಡಗಳ ಕಣ್ಣಾಮುಚ್ಚಾಲೆಯಲ್ಲಿ ಚಾದರ ಹೊದ್ದು ಮಲಗುವ ಸೂರ್ಯ. ಲಂಡನ್‌ನ ಈ ಹವಾಮಾನ ನಾಗತಿಹಳ್ಳಿ ಚಂದ್ರಶೇಖರ್ ಅವರಿಗೆ ಅಷ್ಟೇನೂ ಖುಷಿಕೊಡುತ್ತಿಲ್ಲ. ಪ್ರವಾಸಿಗರಾಗಿ ಹೋಗಿದ್ದರೆ ಅವರು ಇಂಗ್ಲೆಂಡ್‌ನಲ್ಲಿನ ಹವೆಯನ್ನು ಆನಂದಿಸುತ್ತಿದ್ದರು. ಆದರೆ ಈ ಬಾರಿ ಅವರು ಅಲ್ಲಿಗೆ ಹೋಗಿರುವುದು ನಿರ್ದೇಶಕರಾಗಿ.

ಅಮೆರಿಕ, ಪ್ಯಾರಿಸ್ ಹಿನ್ನೆಲೆಯಲ್ಲಿ ನಾಗತಿಹಳ್ಳಿಯವರು ಸೊಗಸಾದ ಪ್ರೇಮಕಥೆಗಳನ್ನು ಈಗಾಗಲೇ ನಿರೂಪಿಸಿದ್ದಾರೆ. ಈ ಬಾರಿ ಅವರು ಬೆನ್ನುಬಿದ್ದಿರುವುದು ಲಂಡನ್ ಎನ್ನುವ ಮಾಯಾಂಗನೆಯ ಹಿಂದೆ. ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಅನಿವಾಸಿ ಕುಟುಂಬದ ಹಿನ್ನೆಲೆಯಲ್ಲಿ ಅವರು ಕಥೆ ಹೇಳಹೊರಟಿದ್ದಾರೆ. ಹಾಗೆಂದು ಇದು ಪ್ರೇಮಪ್ರಧಾನವಾದ ಕಥನವೇನೂ ಅಲ್ಲ. ಥ್ರಿಲ್ಲರ್ ಎಳೆಯೊಂದು ಚಿತ್ರದುದ್ದಕ್ಕೂ ಇದೆ. ನಿರ್ದೇಶಕರಾಗಿ ನಾಗತಿಹಳ್ಳಿ ಅವರ ಪಾಲಿಗೂ ಈ ಸಿನಿಮಾ ಥ್ರಿಲ್ ನೀಡಲಿರುವ ಅನುಭವ.

ಇಂಗ್ಲೆಂಡ್ ದರ್ಶನವಷ್ಟೇ ಅಲ್ಲ, ಭಾರತ ದರ್ಶನವನ್ನೂ ನಾಗತಿಹಳ್ಳಿಯವರ ಸಿನಿಮಾ ಮಾಡಿಸಲಿದೆ. ವಿವಿಧ ಸಂಸ್ಕೃತಿಗಳನ್ನು ಪರಿಚಯಿಸುತ್ತ ಜೀವನದರ್ಶನ ಮಾಡಿಸುವುದು ಅವರ ಸಿನಿಮಾದ ಉದ್ದೇಶ. ಇನ್ನೂ ಹೆಸರಿಡದ ಈ ಸಿನಿಮಾ, ನಾಗತಿಹಳ್ಳಿಯವರ ಹಿಂದಿನ ಚಿತ್ರಗಳಂತೆ ಸಂಬಂಧಗಳ ಕುರಿತು, ಜೀವನಮೌಲ್ಯಗಳ ಕುರಿತು ಮಾತನಾಡಲಿದೆ.

ವಸಿಷ್ಠಸಿಂಹ ಹಾಗೂ ಮಾನ್ವಿತಾ ಹರೀಶ್ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಅರ್ಜುನ್ ಜನ್ಯ ಸಂಗೀತ ಚಿತ್ರಕ್ಕಿದೆ.



## ಬಳ್ಳಿಯ ಮಿಂಚಾದ ತಮನ್ನಾ

ತಮನ್ನಾ ಭಾಟಿಯಾ ಯಶ್ ನಟನೆಯ ‘ಕೆಜಿಎಫ್’ ಚಿತ್ರದ ಗೀತೆಯೊಂದರಲ್ಲಿ ಕುಣಿದುಹೋಗಿದ್ದಾರೆ. ‘ಜೋಕೆ ನಾನು ಬಳ್ಳಿಯ ಮಿಂಚು’ ಹಾಡಿನ ರೀಮಿಕ್ಸ್‌ನಲ್ಲಿ ಅವರು ಕತ್ತಿಯಂತೆ ಮೈ ಬಳುಕಿಸಿದ್ದಾರೆ. ಈ ವಿಶೇಷ ಗೀತೆಯಲ್ಲಿ ಯಶ್ ಹಾಗೂ ತಮನ್ನಾ ಅದ್ಭುತವಾಗಿ ಕುಣಿದಿದ್ದು, ಇದು ಚಿತ್ರದ ವಿಶೇಷಗಳಲ್ಲಿ ಒಂದಾಗಲಿದೆ ಎನ್ನುವ ನಿರೀಕ್ಷೆ ಚಿತ್ರತಂಡದ್ದು.

ಯಶ್ ತಂಡದ ಜೊತೆ ಕೆಲಸ ಮಾಡಿದ್ದು ಮನೆ ಮಂದಿಯೊಂದಿಗೆ ಸಮಯ ಕಳೆದಷ್ಟೇ ಸೊಗಸಾಗಿತ್ತು ಎಂದು ತಮನ್ನಾ ಹೇಳಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ‘ಕೆಜಿಎಫ್’ ಬಗ್ಗೆ ಒಳ್ಳೆಯ ಮಾತುಗಳನ್ನಾಡಿರುವ ಅವರು – ‘ಕೆಜಿಎಫ್ ಚಿತ್ರ ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಶೀಘ್ರವೇ ಚಿತ್ರಮಂದಿರಗಳಿಗೆ ಬರಲಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘ಕೆಜಿಎಫ್’ ಗಾಂಧಿನಗರದ ಪಾಲಿಗೆ ಅತಿ ನಿರೀಕ್ಷೆಯ ಸಿನಿಮಾ. ಹೆಚ್ಚೂ ಕಡಿಮೆ ಎರಡು ವರ್ಷಗಳಿಂದ ರೂಪುಗೊಳ್ಳುತ್ತಿರುವ ಈ ಸಿನಿಮಾ ಈಗ ಮುಕ್ತಾಯದ ಹಂತದಲ್ಲಿದೆ. ಪ್ರಶಾಂತ್ ನೀಲ್ ನಿರ್ದೇಶನದ ಈ ಸಿನಿಮಾದಲ್ಲಿ ಯಶ್‌ಗೆ ಜೋಡಿಯಾಗಿ ಶ್ರೀನಿಧಿ ಶೆಟ್ಟಿ ನಟಿಸಿದ್ದಾರೆ. ಅನಂತನಾಗ್, ಅಚ್ಯುತಕುಮಾರ್, ನಾಜರ್, ಬಿ. ಸುರೇಶ್, ಶ್ರೀನಿವಾಸಮೂರ್ತಿ, ವಸಿಷ್ಠಸಿಂಹ ಹಾಗೂ ರಮ್ಯಕೃಷ್ಣ ತಾರಾಗಣದಲ್ಲಿರುವ ಪ್ರಮುಖರು. ರವಿ ಬಸ್ರೂರು ಸಂಗೀತ, ಭುವನ್ ಗೌಡ ಛಾಯಾಗ್ರಹಣ ಚಿತ್ರಕ್ಕಿದೆ. ಇದೇ ವರ್ಷದ ಕೊನೆಯಲ್ಲಿ ಸಿನಿಮಾ ತೆರೆ ಕಾಣಲಿದೆ.

■ ರಘು